ಓ.ಎಸ್.ನಂ.೧೪೪-೧೨
ಪಿ .ಡಬ್ಲ್ಯೂ-೨

**ದಿಃ 20-08-2018 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀಸವಾಲುಃ ೧ ರಿಂದ ೩ ನೇ ಪ್ರತಿವಾದಿ ಪರ ಶ್ರೀ ಸಿ ಎಸ್ ಎಸ್ ವಕೀಲರಿಂದ.**

ನಾನು ಮೂಲತಃ ಅನುವನಹಳ್ಳಿ ಗ್ರಾಮದವನು ಎಂದರೆ ನಿಜ. ನನಗೆ ನಮ್ಮ ಊರಿನವರಾದ ಸಿದ್ದಪ್ಪನ ಮಗ ರಾಮಪ್ಪನವರ ಪರಿಚಯ ಇದೆ. ರಾಮಪ್ಪನವರು ಈಗ ಮೃತ ಪಟ್ಟಿದ್ದು ಅವರ ಮಗ ಬದುಕಿದ್ದಾರೆ. ರಾಮಪ್ಪನವರ ತಂದೆಗೆ ಗಿರಿ ಸಿದ್ದಪ್ಪ ಎಂದು ಸಹ ಕರೆಯುತ್ತಿದ್ದರು ಎಂದರೆ ನಿಜ. ಸರ್ವೆ ನಂ, ೬೩ ರಾಮಪ್ಪ ಬಿನ್ ಗಿರಿ ಸಿದ್ದಪ್ಪ ನವರಿಗೆ ಸೇರಿದ ಜಮೀನು ಎಂದರೆ ನಿಜ. ರಾಮಪ್ಪನವರ ಜಮೀನಿನ ಪೂರ್ವಕ್ಕೆ ಗಂಗಣ್ಣನ ಜಮೀನು ಇದೆ ಎಂದರೆ ಸಾಕ್ಷಿಯು ಗಂಗಮ್ಮನವರ ಜಮೀನು ಇದೆ ಎನ್ನುತ್ತಾರೆ. ಗಂಗಮ್ಮನವರ ತಂದೆಯ ಹೆಸರು ನಂಜಪ್ಪ ಆಗಿದ್ದು ಅವರ ಗಂಡನ ಹೆಸರು ನನಗೆ ಗೊತ್ತಿಲ್ಲ. ಪೂರ್ವಕ್ಕೆ ಈಶ್ವರಪ್ಪ ಬಿನ್ ಗಂಗಣ್ಣನವರ ಜಮೀನು ಇದೆ ಎಂದರೆ ಸಾಕ್ಷಿಯು ಮೊದಲು ಇತ್ತು ಆದರೆ ಈಗ ಮಾರಾಟ ಮಾಡಿದ್ದಾರೆ ಎಂದು ಹೇಳುತ್ತಾರೆ. ರಾಮಪ್ಪನವರ ಜಮಿನಿನ ಪಶ್ಚಿಮಕ್ಕೆ ಹಳ್ಳ ಇದೆ ಎಂದರೆ ನಿಜ. ಉತ್ತರಕ್ಕೆ ಕಣಬಕಟ್ಟೆ ಮಲ್ಲಣ್ಣ ಮತ್ತು ಕೋಟೆ ಈರಣ್ಣ ನವರ ಜಮೀನು ಇದೆ ಎಂದರೆ ಸಾಕ್ಷಿಯು ನನ್ನ ಜಮೀನು ಇದೆ ಎನ್ನುತ್ತಾರೆ. ಸದರಿ ಜಮೀನು ನನ್ನ ಲಲಿತಮ್ಮನವರ ಹೆಸರಿನಲ್ಲಿ ಇದೆ. ಆ ಜಮೀನನ್ನು ನನ್ನ ಅಕ್ಕ ಈರಪ್ಪನವರಿಂದ ಖರೀದಿ ಮಾಡಿರುತ್ತಾರೆ. ದಕ್ಷಿಣಕ್ಕೆ ಕೋಟಪ್ಪ ಮತ್ತು ಕಾಡಯ್ಯನ ಮಗ ಮಲ್ಲೇಶಪ್ಪನವರ ಜಮೀನು ಇದೆ ಎಂದರೆ ಸಾಕ್ಷಿಯು ಸ್ವಲ್ಪ ದೂರದಲ್ಲಿ ಇದೆ ಎಂದು ಹೇಳುತ್ತಾರೆ.

೨. ರಾಮಪ್ಪನವರಿಗೆ ಸೇರಿದ ಜಮೀನನ್ನು ಶಿವರುದ್ರಪ್ಪ ಖರೀದಿ ಮಾಡಿರುತ್ತಾರೆ ಎಂದರೆ ಸಾಕ್ಷಿಯು ರಾಜಪ್ಪ ಮತ್ತು ಶಿವರುದ್ದಪ್ಪ ಇಬ್ಬರು ಜಂಟಿಯಾಗಿ ಖರೀದಿ ಮಾಡಿರುತ್ತಾರೆ ಎಂದು ಹೇಳುತ್ತಾರೆ. ನಾನು ಕ್ರಯಪತ್ರವನ್ನು ನೋಡರುವುದಿಲ್ಲ . ಕ್ರಯಕ್ಕೆ ತೆಗೆದುಕೊಂಡಿರುವ ಜಮೀನು ಸಂಪೂರ್ಣವಾಗಿ ಶಿವರುದ್ರಪ್ಪನ ಸ್ವಾಧೀನದಲ್ಲಿ ಇದೆ ಎಂದರೆ ಸರಿಯಲ್ಲ. ೧ ನೇ ಪ್ರತಿವಾದಿ ಶಿವರುದ್ರಪ್ಪನ ಹೆಂಡತಿಯಾಗಿದ್ದು , ೨ ಮತ್ತು ೩ ನೇ ಪ್ರತಿವಾದಿಯರು ಶಿವರುದ್ರಪ್ಪನ ಮಕ್ಕಳು ಎಂದರೆ ನಿಜ. ಶಿವರುದ್ರಪ್ಪನವರು ರಾಮಪ್ಪನವರಿಂದ ಖರೀದಿ ಮಾಡಿದ ಸ್ವತ್ತು ಈಗ ಅವರ ಹೆಂಡತಿ

ಮಕ್ಕಳ ಸ್ವಾಧೀನದಲ್ಲಿ ಇದೆ ಎಂದಸರೆ ಸಾಕ್ಷಿಯು ಈಗೇ ರಾಜಪ್ಪನವರ ಕುಟುಂಬದ ಸ್ವಾಧೀನದಲ್ಲಿ ಇದೆ. ರಾಜಪ್ಪನವರ ಕುಟುಂಬದ ಸ್ವಾಧೀನದಲ್ಲಿ ಸದರಿ ಸ್ವತ್ತು ಎಂದಿಗೂ ಇರಲಿಲ್ಲ ಎಂದರೆ ಸರಿಯಲ್ಲ. ವಾದಿ ಮತ್ತು ನಾನು ವಿಶ್ವಾಸದಿಂದ ಇದ್ದೇವೆ. ವಾದಿಯೊಂದಿಗೆ ವಿಶ್ವಾಸದಿಂದ ಇರುವುದಂರಿದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಚಕ್ಕುಬಂದಿ ಸರಿ ಇರುವುದಿಲ್ಲ ಎಂದರೆ ಸರಿಯಲ್ಲ. ೧ ಎಕರೆ ೧೮ ಗುಂಟೆ ಜಮೀನಿಗೆ ಸಂಬಂಧಿಸಿದಂತೆ ಈ ದಾವ ಹಾಕಿರುತ್ತಾರೆ. ವಾದಿ ೧ ಎಕರೆ ೧೮ ಗುಂಟೆ ಜಮೀನಿನ ಸ್ವಾಧೀನದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ರಾಜಪ್ಪನವರು ಖರೀದಿ ಮಾಡಿದ ಕ್ರಯಪತ್ರವನ್ನು ನಾನು ನೋಡಿರುವುದಿಲ್ಲ.

ನಾಲ್ಕನೇ ಪ್ರತಿವಾದಿ ಪರ ವಕೀಲರು ಪಾಟೀ ಸವಾಲು ಇರುವುದಿಲ್ಲ ಎಂದು ಹೇಳಿರುತ್ತಾರೆ.

**ಮರುವಿಚಾರಣೆ** : ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಕೇ. ಸ. ಇ. ಎ. ಒ.

ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ
ಪ್ರ.ದ.ನ್ಯಾ.ದಂ. ರವರು, ತರೀಕೆರೆ.